ಹೊರಬಾಗಿಲಿನತ್ತ ನಡೆದಂತೆ, 'ಊಟ' ಎಂದು ಕತ್ತು ಕೊಂಕಿಸಿದಳು, ಮಧು. 'ಬೇಡ ಅಂತ ಆಗಲೇ ಹೇಳಲಿಲ್ಲವಾ?'– ನನ್ನ ದನಿ ನನಗೇ ಗಡುಸಾಗಿದ್ದಂತೆ ಗೋಚರವಾಯಿತು. ಅವಳ ಕಡೆ ತಿರುಗಿಯೂ ನೋಡಲಿಲ್ಲ.

ಮೆಟ್ಟಿಲಿಳಿದು, ಹೊಟೇಲಿನ ಸಮೀಪದಲ್ಲಿಯೇ ನಿಂತಿದ್ದ ರಿಕ್ಷಾವನ್ನು ಕರೆದೆ. ಮುನಿಸಿನಿಂದಲೋ ಏನೋ, ತುದಿ ಮೆಟ್ಟಿಲ ಮೇಲೆ ನಿಂತಿದ್ದ ಮಧುಳನ್ನು 'ಬಾ' ಎಂದು ಸನ್ನೆ ಮಾಡಿ ಕರೆದೆ. ಅವಳು ಮುಖ ಸಣ್ಣಗೆ ಮಾಡಿಕೊಂಡು, ಮುದುರಿಕೊಂಡು ಕುಳಿತಳು, ಡ್ರೈವರ್‌ಗೆ 'ರೈಲ್ವೆಸ್ಟೇಷನ್' ಎಂದಾಗ ಅವಳು ಬೆಚ್ಚಿದವಳಂತೆ ನನ್ನ ಕಡೆಗೆ ನೋಡಿದಳು. 'ನಿನಗೆ ಇನ್ನೂ ಇಪ್ಪತ್ತು ನಿಮಿಷ ಟೈಂ ಸಿಕ್ಕುತ್ತೆ. ಯಾವುದೇ ನಿರ್ಧಾರಕ್ಕೆ ಬರೋದಕ್ಕೆ. ಯಾಕೆ ಹಾಗೆ ನೋಡುತ್ತೀಯ?' ಎಂದೆ.

ನನ್ನ ನಡವಳಿಕೆಯನ್ನು ಮೆಚ್ಚಿಕೊಂಡವಳಂತೆ ಈಗ ಮಧು ಹೇಳಿದಳು–'ರೇಖಾಳ ವಿಷಯ. ಯೋಚನೆ ಮಾಡಬೇಕಾದದ್ದೆ. ನಮ್ಮಮ್ಮನ ತಲೆಯಲ್ಲಿ ಅವಳಿಗೆ ಮದುವೆ ಮಾಡಬೇಕು ಅನ್ನೋದೊಂದು ಚೆನ್ನಾಗಿ ಅಂಟಿಬಿಟ್ಟಿದೆ.'

ನಾನು ಸುಮ್ಮನಿದ್ದುದನ್ನು ನೋಡಿ ಮಧು ಸುಮ್ಮನಾದಳು.

ಸ್ಟೇಷನ್ ಬಾಗಿಲಲ್ಲಿ ರಿಕ್ಷಾ ಇಳಿದಾಗ ಮತ್ತೆ ಶುರು ಮಾಡಿದಳು–

'ರೇಖಾ ಬೇರೆಯವರ ತರಹ ಅಲ್ಲ. ಬಹಳ ಮುಗ್ಧ ಹುಡುಗಿ, ಅಮ್ಮ ಗದರಿಸಿ ಒಂದು ಮಾತು ಹೇಳಿದರೆ, ಒಪ್ಪಿಕೊಂಡುಬಿಡುತ್ತಾಳೆ. ಈಗ ಹದಿನೈದು ದಿನದಲ್ಲಿ ಹೋಗಿದ್ದಾಗ ಏನಾಯ್ತು ಅಂತ ನಿಮಗೆ ಹೇಳಿದ್ದೆನಲ್ಲ. ಹುಡುಗ ಎಲ್ಲ ಸರಿ, ಆದರೆ ಎಡಗಾಲು ಮಾತ್ರ ಸ್ವಲ್ಪ ತಿರುಚಿದೆ ಅಂತೆಲ್ಲ ಹೇಳ್ತಾ ಇದ್ದಳು ಅಮ್ಮ. ಕೊನೆಗೆ ಕೆಲಸ ಏನೂ ಅಂದರೆ, ಡಿಸ್ಟ್ರಿಕ್ಟ್ ಆಫೀಸಿನಲ್ಲಿ ಸೆಕೆಂಡ್ ಡಿವಿಜನ್ ಕ್ಲಾರ್ಕ್ ಅಂತೆ. ಅಂತಹ ಸೌಭಾಗ್ಯಕ್ಕೆ ರೇಖಾನ ಅವನಿಗೆ ಯಾಕೆ ಕೊಡಬೇಕು?'

ನಾವೀಗ ಟಿಕೆಟ್ ಕೌಂಟರಿನ ಬಳಿ ಬಂದಿದ್ದೆವು. ಯಾರೋ ಒಂದಿಬ್ಬರು ಹಳ್ಳಿಗರು ಲಗುಬಗೆಯಿಂದ ಟಿಕೆಟ್ ತೆಗೆದುಕೊಳ್ಳುತ್ತಿದ್ದರು.

'ರೇಖಾನ ಕರೆದುಕೊಂಡು ಬಂದುಬಿಡು, ಇಲ್ಲಿಗೇ'– ನಾನು ಏನೋ ಹೊಸದೊಂದು ವಿಷಯ ಹೊಳೆದವನಂತೆ ಹೇಳಿದೆ.

'ಸದ್ಯ ನಾನೊಬ್ಬಳಿಲ್ಲಿರೋದು ಅಮ್ಮನಿಗೆ ಇಷ್ಟ ಇಲ್ಲ. ಆದರೆ ದುಡಿಯೋವರು ಒಬ್ಬರು ಬೇಕಲ್ಲ. ಅದಕ್ಕೆ ಸುಮ್ಮನಿದಾಳೆ. ಅಲ್ಲದೆ ರೇಖಾಗೆ ದುಡೀಬೇಕೂ ಅನ್ನೋದೂ ಇಲ್ಲ.'

ಮನೆಗೆಲ್ಲ ಹಿರಿಯವಳಾಗಿ, ಇವಳಿಗೆ ಒಳ್ಳೇ ಜವಾಬ್ದಾರಿ ಎಂದುಕೊಂಡೆ.

ಟಿಕೆಟ್ ಕೌಂಟರ್ ಈಗ ಖಾಲಿಯಾಗಿತ್ತು.

ಮಧು ಪರ್ಸ್‌ನಲ್ಲಿ ಕೈಹಾಕಿ ದುಡ್ಡು ತೆಗೆಯುತ್ತಿದ್ದಳು.

ಗಡಿಯಾರ ಹತ್ತು ಕಾಲು ಗಂಟೆ ತೋರಿಸುತ್ತಿತ್ತು.

'ಬೇಡ ಬಾ' ಅವಳ ಕೈಯನ್ನು ತೆಗೆದುಕೊಂಡು ಹೇಳಿದೆ– 'ಹೇಗಿದ್ದರೂ ಈಗ ನಿಮ್ಮಮ್ಮ ಒಬ್ಬರೇ ಇಲ್ಲವಲ್ಲ ಮನೇಲಿ, ಎಲ್ಲವನ್ನೂ ನಿರ್ಧಾರ ಮಾಡಲಿಕ್ಕೆ, ನಿಮ್ಮ ತಂದೆ ಬೇರೆ ಬಂದಿದಾರಲ್ಲ.'

'ಬರದೇನೆ ಇದ್ದರೆ?'

'ಸ್ವಲ್ಪ ಹೊತ್ತಿನ ಮೊದಲು ಅಷ್ಟೊಂದು ನಂಬಿಕೆಯಿಂದ ಬಂದಿರ್ತಾರೆ ಅಂತ ನೀನೇ ಹೇಳಿದೆ.'

'ಹಾಗಿದ್ದರೆ ತಂದೇನ ನೋಡಲಿಕ್ಕಾದರೂ ಹೋಗಲೇಬೇಕಲ್ಲ.'

'ನಾನೂ ಬಂದುಬಿಡಲೆ ನಿನ್ನ ಜತೆಗೆ?' ಎಂದು ಕೇಳೋಣ ಎನಿಸಿ, ಬಾಯಿ